ದಿನಾಂಕ 13.03.2024 ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣೀಕರಿಸಲಾಯಿತು.

ಪಾಟೀ ಸವಾಲುಃ ಪ್ರತಿವಾದಿಯ ಪರ ಮಾನ್ಯ ಶ್ರೀ ಹೆಚ್ ಎ ಎಸ್ ವಕೀಲರಿಂದಃ

ದಾವೆಗೆ ನಾನೇ ಮಾಹಿತಿ ನೀಡಿರುತ್ತೇನೆ. ದಾವೆಗೆ ದಾಖಲೆಗಳನ್ನು ನಾನು 2019 ರಲ್ಲಿ ವಕೀಲರಿಗೆ ನೀಡಿರುತ್ತೇನೆ. ನಾನು ಈ ಹಿಂದೆ ನನ್ನ ವಿರುದ್ಧ ತಂದಿರುವ ದಾವ ಸಂಃ 3/19 ರ ಸಮಯದಲ್ಲಿ ಸದ್ರಿ ಈ ದಾವೆಯ ದಾಖ್ಲೆಗಳನ್ನು ವಕೀಲರಿಗೆ ನೀಡಿರುತ್ತೇನೆ. ಸ.ನಂ.118 ರಲ್ಲಿ ಒಟ್ಟು ವಿಸ್ತೀರ್ಣ 1 ಎಕ್ರೆ 26 ಗುಂಟೆ ಇರುತ್ತದೆ. ಸ.ನಂ.118 ರಲ್ಲಿ ಒಟ್ಟು ವಿಸ್ತೀರ್ಣ 1 ಎಕ್ರೆ 26 ಗುಂಟೆ ಮೂಲತಃ ತುದೀಪೇಟೆ ಹನುಮಂತ ದೇವರಿಗೆ ಸೇರಿರುತ್ತದೆ ಎಂದರೆ ಸರಿಯಲ್ಲ. ಭೂ ನ್ಯಾಯ ಮಂಡಳಿ ಯಿಂದ ನಿಪಿ-1 ರಂತೆ ಪಕೀರಪ್ಪನವರಿಗೆ ಸದ್ರಿ ಆಸ್ತಿ 1 ಎಕ್ರೆ 26 ಗುಂಟೆ ಅವರ ಹೆಸರಿಗೆ ಆಗಿರುತ್ತದೆ ಎಂದರೆ ಸರಿ. ಸದ್ರಿ ಪಕೀರಪ್ಪ ಸ.ನಂ.118 ರಲ್ಲಿ ಒಟ್ಟು ವಿಸ್ತೀರ್ಣ 1 ಎಕ್ರೆ 26 ಗುಂಟೆಯ ಗೇಣಿ ದಾರರಾಗಿರು ತ್ತಾರೆ ಎಂದರೆ ಸರಿ. ಅದರ ಮೂಲ ಮಾಲೀಕರು ಯಾರು ಎಂದು ನನಗೆ ಹೇಳಲಾಗುವುದಿಲ್ಲ. ನಾನು ಮೂಲ ದಾಖಲೆಗಳನ್ನು ನೋಡದೇ ಇರುವುದರಿಂದ ದಾವ ಆಸ್ತಿಗೆ ಸಂಬಂಧಿಸಿ ಆಗಿರುವ ವ್ಯವಹಾರಗಳು ಮತ್ತು ಅದು ಮೂಲತಃ ಯಾರ ಹೆಸರಿನಲ್ಲಿ ಇರುತ್ತದೆ ಎಂದು ಹೇಳಲು ಆಗುವುದಿಲ್ಲ ಎಂದರೆ ಸರಿ.

ಪಕೀರಪ್ಪ ಹೆಸರಿಗೆ ಭೂ ನ್ಯಾಯ ಮಂಡಳಿ ಸದ್ರಿ ಜಮಿಾನಿನ ಸ್ವಾಧೀನದ ಬಗ್ಗೆ ಯಾವ ಆದೇಶ ಮಾಡಿರುತ್ತದೆ ಎಂದು ಹೇಳಲು ಆಗುವುದಿಲ್ಲ ಎಂದರೆ ಸರಿ. ಮೂಲ ದಾಖಲೆಗಳನ್ನು ನೋಡದೇ ಇರುವುದರಿಂದ ಪಕೀರಪ್ಪ ಸ್ವಾಧೀನಕ್ಕೆ 1 ಎಕ್ರ 26 ಗುಂಟೆ ಜಮಿಾನು ಸ್ವಾಧೀನ ನೀಡಿರುವ ಬಗ್ಗೆ ನಿಮಗೆ ಗೊತ್ತಿಲ್ಲ ಎಂದರೆ ಸಾಕ್ಷಿ ದಾಖಲೆಗಳನ್ನು ನೋಡಿರುತೇನೆ ಎಂದು ನುಡಿಯುತ್ತಾರೆ. ಯಾವ ಯಾವ ದಾಖಲೆಗಳನ್ನು ನೋಡಿದ್ದೀರಾ ಎಂದು ಕೇಳಿದ ಪ್ರಶ್ನೆಗೆ ಸಾಕ್ಷಿ ಫಾರಂ ನಂ.10, ಪಹಣಿ ಮತ್ತು ಇತರೆ ದಾಖಲೆಗಳನ್ನು ನೋಡಿರುತ್ತೇನೆ ಈಗ ನೆನಪಿಲ್ಲ ಎಂದು ನುಡಿಯುತ್ತಾರೆ. ಪಕೀರಪ್ಪನಿಗೆ ಸ್ವಾಧಿನ ಕೊಟ್ಟಿರುವ ನೀವು ಕೊಟ್ಟಿರುವ ದಾಖಲೆ ಯಾವುದು ಎಂದು ಕೇಳಿದ ಪ್ರಶ್ನೆಗೆ ಸಾಕ್ಷಿಯು ಈಗ ನೆನಪಿಲ್ಲ ಎಂದು ನುಡಿಯುತ್ತಾರೆ.

ಭೂ ನ್ಯಾಯಾ ಮಂಡಳಿ ಆದೇಶದಂತೆ ನನ್ನ ಅಜ್ಜ ಪಕೀರಪ್ಪನಿಗೆ ಈಗ ನೋಡುತ್ತಿರುವ ದಾಖಲೆ ಪ್ರಕಾರ ನನ್ನ ಅಜ್ಜನಿಗೆ 1 ಎಕ್ರೆ 26 ಗುಂಟೆ ಸ್ವಾಧೀನ ನೀಡಿರುವುದಿಲ್ಲ ಎಂದರೆ ಸದ್ರಿ ದಾಖಲೆ ಸುಳ್ಳು ಆಗಿರುತ್ತದೆ ಎಂದು ನುಡಿಯುತ್ತಾರೆ. ನನ್ನ ಅಜ್ಜ ಪಕೀರಪ್ಪನಿಗೆ ಸ್ವಾಧೀನ ನೀಡಿರುವ ಬಗ್ಗೆ ದಾಖಲೆಗಳನ್ನು ನ್ಯಾಯಾಲಯಕ್ಕೆ ಹಾಜರು ಮಾಡಲು ನನಗೆ ಯಾವುದೇ ತೊಂದರೆ ಇರುವುದಿಲ್ಲ. ನನ್ನ ಅಜ್ಜ ದಾವಾ ಆಸ್ತಿ 1 ಎಕ್ರೆ 26 ಗುಂಟೆ ಪೂರ್ತಿ ವಿಸ್ತೀರ್ಣದಲ್ಲಿ

ನಾನು ಸ್ವಾಧೀನ ಹೊಂದಿರುವುದಿಲ್ಲ ಅದರಲ್ಲಿ ಬೇರೆಯವರು ಮನೆ ಕಟ್ಟಿಕೊಂಡಿರುತ್ತಾರೆ ಇನ್ನುಳಿದ ಖಾಲಿ ಜಮೀನು ನನಗೆ ಸ್ವಾಧೀನ ನೀಡಬೇಕೆಂದು ಈಗ ನನಗೆ ತೋರಿಸಿರುವ ದಾಖ್ಲೆ ಪ್ರಕಾರ ನನ್ನ ಅಜ್ಜ ಹೇಳಿಕೆ ನೀಡಿರುತ್ತಾರೆ ಎಂದರೆ ಸರಿಯಲ್ಲ. ನನ್ನ ಅಜ್ಜನಿಗೆ ಸ್ವಾಧೀನ ನೀಡಿರುವ ದಾಖ್ಲೆಗಳನ್ನು ಮತ್ತು ಹೇಳಿಕೆಗಳನ್ನು ನ್ಯಾಯಾಲಯದ ಮುಂದೆ ಹಾಜರು ಮಾಡಲು ನನಗೆ ಯಾವುದೇ ತೊಂದರೆ ಇರುವುದಿಲ್ಲ ಎಂದರೆ ಸರಿಯಲ್ಲ.

ಸ.ನಂ.118 ರಲ್ಲಿ 1 ಎಕ್ರೆ 26 ಗುಂಟೆ ಜಾಗವನ್ನು ಸ್ವಾಧೀನ ಬಿಡಿಸಿಕೊಡಬೇಕೆಂದು ನಮ್ಮ ಕುಟುಂಬದ ಸದಸ್ಯರು ಅರ್ಜಿ ಸಲ್ಲಿಸಿರುವ ಬಗ್ಗೆ ನನಗೆ ನೆನಪಿಲ್ಲ. ನನ್ನ ತಾಯಿ ಒಎಸ್ ಸಂಃ 3/19 ಕ್ಕೆ ಮಾಹಿತಿ ನೀಡಿದ್ದು ಮತ್ತು ದಾವಾ ಆಸ್ತಿಯ ದಾಖಲೆಗಳನ್ನು ಪರಿಶೀಲನೆ ಮಾಡಿದ್ದರಿಂದ ನನಗೆ ಆಸ್ತಿಯ ಬಗ್ಗೆ ಯಾವುದೇ ಮಾಹಿತಿ ಇರುವುದಿಲ್ಲ ಎಂದರೆ ಸರಿ.

ನಿಪಿ-6 ನಕಾಶೆ ಆಗಿದ್ದು ಅದನ್ನು ತಯಾರಿಸಲು ಯಾರು ಅರ್ಜಿ ಸಲ್ಲಿಸಿರುತ್ತಾರೆ ಎಂದು ನನಗೆ ಹೇಳಲು ಆಗುವುದಿಲ್ಲ. ನಿಪಿ-6 ರಲ್ಲಿ ಇರುವ ವಿಚಾರಗಳು ನನಗೆ ಗೊತ್ತಿರುವುದಿಲ್ಲ. ನಿಪಿ-6 ಅನ್ನು ದಾವಾ ಆಸ್ತಿ ಖಾಲಿ ಜಾಗ ಎಂದು ತೋರಿಸಲು ಹಾಜರು ಪಡಿಸಿರುತ್ತೇನೆ. ನಿಪಿ-6 ರಲ್ಲಿ ತೋರಿಸಿದಂತೆ ಕ್ರಮ ಸಂಃ 1 ರಿಂದ 18 ರವರು ಮಾತ್ರ ದಾವಾ ಆಸ್ತಿಯ ಸ್ವಾಧೀನ ಹೊಂದಿರುತ್ತಾರೆ ಎಂದರೆ ಸರಿಯಲ್ಲ ಪಹಣಿದಾರರು ಮಾತ್ರ ನಿಪಿ6 ರಲ್ಲಿ ಯಾವುದೇ ಸ್ವಾಧೀನ ಹೊಂದಿರುವುದಿಲ್ಲ ಎಂದರೆ ಸರಿಯಲ್ಲ. ನಿಪಿ-6 ನಕಾಶೆ ಸರಿ ಇರುತ್ತದೆ.

ದಿಃ 8.11.1979 ರಲ್ಲಿ ಮಹಮ್ಮದ್ ಗೌಸ್ ರವರು 2 ನೇ ಪ್ರತಿವಾದಿಗೆ ಮಾಡಿಕೊಟ್ಟ ದಾಖ್ಲೆ ಊರ್ಜಿತ ಅಲ್ಲ ಎಂದು ಘೋಷಣೆ ಮಾಡಲು ಈ ದಾವೆ ತಂದಿದ್ದು ನನ್ನ ಪ್ರಕಾರ ದಿಃ 8.11.1979 ರಲ್ಲಿ ಮೊಹಮ್ಮದ್ ಗೌಸ್ ಸ್ವಾಧೀನ ಹೊಂದಿರುತ್ತಾರೆ ಎಂದರೆ ಸಾಕ್ಷಿ ನನಗೆ ಗೊತ್ತಿರುವುದಿಲ್ಲ ಎಂದು ನುಡಿಯುತ್ತಾರೆ.

ಮುಂದುವರೆದ ಪಾಟೀ ಸವಾಲಿಗೆ ಸಮಯಾವಕಾಶ ಕೋರಿದ್ದು, ನೀಡಲಾಯಿತು.

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಗಿದೆ.)

ಓ ಹೇ ಕೇ ಸರಿಯಾಗಿದೆ ಎಂದು ಒಪ್ಪಿರುತ್ತಾರೆ.

ಸಾಕ್ಷಿ ಸಹಿಃ

ಸಿವಿಲ್ ಮತ್ತು ಜೆ.ಎಂ.ಎಫ್.ಸಿ. ನ್ಯಾಯಾಧೀಶರು,
ನ.ರಾ. ಪುರ.